ಅಂದ್ಕಂಡಿದೀಯಾ? ಇನ್ನೇನಾರೂ ಇಂತಾ ಕೆಲಸ ಹಚ್ಚಿ ಕಳಿಸಿದ್ರೆ ವಾಪಸು ಮನೆಗೇ ಬರಲ್ಲ ನಾನು.'

ತೊಟ್ಟ ನೈಟಿಯಲ್ಲಿ ಕಣ್ಣು, ಮೂಗು ವರೆಸಿಕೊಳ್ಳಲು ಸಾಧ್ಯವಾಗದ ಪೂರ್ಣಿಮಾ ಅಮ್ಮನ ಬದಿ ನಿಂತು ಅವಳ ಸೆರಗಲ್ಲಿ ಮುಖ ಮುಚ್ಚಿಕೊಂಡು ದುಃಖ ತಡೆಯುವ ಯತ್ನ ಮಾಡಿದಳು. ನಾಗಮ್ಮನ ಕೈ ಅವಳ ತಲೆ ಬಳಸಿ ಎದೆಗಪ್ಪಿಕೊಂಡಿತು.

'ಇಂತಾ ಸುದ್ದಿ ತರೋನು ಇಷ್ಟು ಹೊತ್ತಿನವರೆಗೆ ಎಲ್ಲಿ ಹಾಳಾಗಿ ಹೋಗಿದ್ದೆ? ಆಗ್ಲೇ ಬರೋದಲ್ವಾ?'

'ಅಪ್ಪ ಊಟ ಮಾಡ್ಕಂಡೇ ಹೋಗು ಅಂತ ಕೂರಿಸ್ಗಂಡ ಕಣೇ. ಕೆಂಬರಿವೆ ಸೊಪ್ಪಿನ ಹುಳಿ ಎಷ್ಟು ಲಾಯ್ಕಿತ್ತು ಗೊತ್ತಾ?'

'ನಿನ್ನ ಹೊಟ್ಟೆ ಒಡಿಯ. ಅನ್ನಕ್ಕೆ ಗತಿ ಇಲ್ದೆ ನೀನು ಅವರ ಮನೆ ಬಾಗ್ಲಿಗೆ ಹೋಗಿದ್ದನೋ? ಹೋದ ಕೆಲಸ ಆಗ್ಲಿಲ್ಲ ಅಂದ್ರೆ ನಿಂತ ಕಾಲಲ್ಲಿ ಹೊರಟು ಬರೋದಲ್ವಾ?'

'ಕೆಲಸ ಆಗ್ಲಿಲ್ಲ ಅಂತ ನಾನೆಲ್ಲಿ ಹೇಳ್ದೆ?'

'ಕತ್ತೆ ಮುಂಡೇಗಂಡ, ಹಿಡಿಕುಂಟೆ ತಗಂಡು ಬಂದು ಜಕಣೆ ಬಿಡಿಸ್ತೀನಿ ನೋಡು. ಹೋದ ಕೆಲಸ ಏನಾಯ್ತೂಂತ ಸರಿಯಾಗಿ ಬೊಗಳು..'

ಅಮ್ಮನ ಸೆರಗಿನ ಮರೆಯಿಂದ ಪೂರ್ಣಚಂದ್ರನಂತೆ ಹೊರಗಿಣುಕಿದ್ದ ಅಕ್ಕನ ಮುಖ ನೋಡುತ್ತಾ, ತೊಟ್ಟ ಅಂಗಿಯ ಕಾಲರನ್ನು ಬಲಗೈಯಲ್ಲೆತ್ತಿ ಅಲುಗಿಸುತ್ತಾ, ಕುಶಾಲಿನಿಂದ ಹೇಳಿದ ಪದ್ಮನಾಭ,

'ನನ್ನ ಏನೂಂತ ತಿಳ್ಕೊಂಡಿದೀರಿ? ಹೋದ ಕೆಲಸ ಹಣ್ಣು ಮಾಡ್ಕಂಡೇ ಬಂದಿದೀನಿ'

'ಅಂದ್ರೆ?'

'ಬಾಯ್ಬಿಟ್ಟು ಹೇಳ್ಬೇಕನೇ? ನಾನು ಫೋನ್ ಮಾಡ್ತಿದ್ದ ಹಾಗೆ ಅಪ್ಪ ಮನೆಬಾಗ್ಲಲ್ಲಿ ಹಾಜರಾಗ್ತಾನೆ..'

'ಸುಮ್ನುಮ್ನೆ ಹೆದರಿಸಿಟ್ಟಲ್ಲೋ, ನಿನ್ನ ಮಕಕ್ಕಿಷ್ಟು.. ' ಪೂರ್ಣಿಮಾ ಒಂದೇ ಹಾರಿಗೆ ತಮ್ಮನ ಬಳಿ ಧಾವಿಸಿ ಅವನ ಬೆನ್ನ ಮೇಲೆ ಗುಧುಮ್ಮನೆ ಗುದ್ದಿದಳು, ಅದುಮಿಟ್ಟ ತನ್ನ ಉದ್ವೇಗವನ್ನು ಹರಿಬಿಡುವವಳಂತೆ. ಅವಳ ಕಣ್ಣ ತುಂಬಾ ನೀರು. ಮುಖದ ತುಂಬಾ ನಗು. ಮಗಳ ಸಂತೋಷ ನೋಡುತ್ತಿದ್ದರೆ ನಾಗಮ್ಮನಿಗೆ ಇಂತಾದ್ದೆಂದು ಹೇಳಲಾಗದ ಭಾವ ಮನಸ್ಸಿನಲ್ಲಿ ಹೊಯ್ದಾಡುತ್ತಿದೆ. ಕೊನೆಗೆ ಆ ಅಪ್ಪನೇ ಮಕ್ಕಳ ಕಣ್ಣಲ್ಲಿ ದೊಡ್ಡಮನುಷ್ಯ ಆಗಿ ಬಿಡುತ್ತಾನೆಯೇ? ತನ್ನ ಮಟ್ಟಿಗೆ ಅವನು ಇಲ್ಲಿಗೆ ಬರಲು ಒಪ್ಪಿದ್ದು ಒಳ್ಳೆಯದಾಯ್ತೋ, ಅಥವಾ ಅಶುಭದ ಮುನ್ಸೂಚನೆಯೋ? ಹೊಟ್ಟೆಯಲ್ಲಿ ಹುಟ್ಟಿದ ತನ್ನೆರಡು ಮಕ್ಕಳನ್ನು ಹೊರತುಪಡಿಸಿ ಬೇರೆ ಪ್ರಪಂಚವೇ ತನಗಿಲ್ಲ ಎನ್ನುವ ಹಾಗೆ ಇದುವರೆಗೆ ಬದುಕಿದವಳ ಮನಸ್ಸಿನಲ್ಲಿ ಏನೇನೋ ಹಳವಂಡಗಳು. ಅಕ್ಕ, ತಮ್ಮ ಕಣ್ಣೆದುರೇ ಲಲ್ಲೆ ಹೊಡೆಯುತ್ತಿದ್ದರೂ ಅವಳ ಚಿತ್ತ ಮತ್ತೆಲ್ಲಿಯೋ ತೊಡಕಿಕೊಂಡಿದೆ.

'ಅಪ್ಪಾನೇ ಅಡಿಗೆ ಮಾಡಿದ್ನಾ?' ಕೇಳುತ್ತಿದ್ದಾಳೆ ಮಗಳು.

'ಹೂಂ ಕಣೇ..'

'ಉಂಡ್ಕಂಡೇ ಹೋಗ್ಬೇಕು ಅಂತ ಒತ್ತಾಯ ಮಾಡಿದ್ರಾ, ಅಥವಾ ನೀನೇ ಚಟ್ಟೆಮುಟ್ಟೆ ಹಾಕಿ ಕೂತ್ಗಂಬಿಟ್ಯಾ?' ತಮ್ಮನ ಬಲಗೈ ಹಿಡಿದೆಳೆದು ಮೂಸಿ ನೋಡಿದಳು ಅಕ್ಕ.

'ಹೌದು ಕಣೋ, ನೀ ಹೇಳಿದ್ದು ಕರೆಕ್ಟು. ಕೈ ತೊಳ್ಕಂಡ್ಮೇಲೂ ನಿನ್ನ ಕೈ ಘಮಘಮಾಂತಿದೆ..'

'ಏ ಕತ್ತೆ, ನಾನು ಸರಿಯಾಗಿ ಕೈ ತೊಳೀಲಿಲ್ಲ ಅಂತ ಚಾಳಿಸ್ತಿದೀಯನೇ?'

ಯಾಕೋ ಈ ಚೆಲ್ಲಾಟ ಸಹಿಸಲು ಸಾಧ್ಯವಿಲ್ಲ ಎನಿಸುವಷ್ಟು ಕಿರಿಕಿರಿಯಾಗಿಬಿಟ್ಟಿತು ನಾಗಮ್ಮನಿಗೆ. ಯಾವತ್ತೂ ಈ ಮನೆಯಲ್ಲಿ ಕೇಳಿ ಬರದಿದ್ದ ಅಪ್ಪನ ಕುರಿತಾದ ಮಾತುಗಳು ಮಕ್ಕಳ ಬಾಯಲ್ಲಿ ಉದುರುದುರಿ ಬೀಳುತ್ತಿರುವುದು ಅವಳ ಮಟ್ಟಿಗೆ ಸಹನಾತೀತ.

'ಮುಸ್ಸಂಜೆ ಆಯ್ತು, ಹೋಗಿ ದೇವರ ಮುಂದೆ ದೀಪ ಹಚ್ಚಿಡೇ. ಕರಟು ಪುರಾಣ ಆಮೇಲೆ ಮಾಡ್ಕಳಿ. ನಾನು ಹಾಲು ಕರ್ಕಂಡು ಬರ್ತೀನಿ. ಡಿಕಾಕ್ಷನ್ನು ಉಂಟಾ ನೋಡು..' ನಾಗಮ್ಮ ಮಗಳಿಗೆ ಕೆಲಸ ಹಚ್ಚಿ ಕೊಟ್ಟಿಗೆಯ ಕಡೆ ಹೊರಟಳು.

'ಅಲ್ಲಿ ಏನೇನಾಯ್ತು? ಮಗನಿಗೆ ಆ ಮನೆಯಲ್ಲಿ ಯಾವ ಥರದ ಸ್ವಾಗತ ಸಿಕ್ಕಿತು?' ವಿವರ ತಿಳಿದುಕೊಳ್ಳಲು ನಾಗಮ್ಮ ಉತ್ಸುಕಳಾಗಿದ್ದಾಳೆ, ಪೂರ್ಣಿಮಾ ಕೂಡಾ.

ಅಮ್ಮ ಕರೆದು ತಂದ ತಂಬಾಲನ್ನು ಕಾಯಿಸಿ ಮೂರು ಲೋಟ ಕಾಫಿ ರೆಡಿ ಮಾಡಿದಳು ಪೂರ್ಣಿಮಾ.

'ಕೈತಪ್ಪಿ ಸಕ್ಕರೆ ಜಾಸ್ತಿ ಬಿದ್ದಿದ್ಯಾ? ಅಥವಾ ಬೇಕೆಂದೇ ಹಾಕಿದ್ಯಾ?'

'ಪಾಯಸ ಇದ್ದಾಗಿದೆ' ಅಂದಳು ನಾಗಮ್ಮ.

'ನಿಂಗೇನು ಸಕ್ಕರೆ ಖಾಯಿಲೆ ಇಲ್ವಲ್ಲಾ, ಕುಡಿ..' ಎಂದಳು ಮಗಳು, ಮೋದದಿಂದ. ಅಮ್ಮ, ಮಗಳು ಕೇಳದೆಯೇ ಪದ್ಮನಾಭ ತಾನು ಮನೆ ಬಿಟ್ಟು ಹೊರಟಾಗಿನಿಂದ ಏನೇನಾಯ್ತು ಎನ್ನುವುದರ ಸಂಪೂರ್ಣ ವರದಿ ಒಪ್ಪಿಸಲು ತಯಾರಾದ.

* * *

ಅಂದುಕೊಂಡ ಹಾಗೆ ಸುಸೂತ್ರವಾಗಿ ನಡೆಯುತ್ತಿದೆ ಪ್ರತಿಯೊಂದೂ. ನಿಶ್ಚಿತಾರ್ಥದ ದಿನ ಬೆಳಿಬೆಳಿಗ್ಗೆ ಬೀಗರು ಬಂದು ತಲುಪುವುದರೊಳಗಾಗಿ ಬರುತ್ತೇನೆಂದು ರಾಮಚಂದ್ರ ತಿಳಿಸಿದ್ದ. ನಾಗಮ್ಮ ಬೇಕಾದ ಪೂರ್ವ ತಯಾರಿಗಳನ್ನು ಮುತುವರ್ಜಿಯಿಂದ ಅಣಿ ಮಾಡಿಟ್ಟಿದ್ದಳು. ನಿಶ್ಚಿತಾರ್ಥವೊಂದನ್ನು ಮನೆ ಬಾಗಿಲಲ್ಲಿ ನೆರವೇರಿಸಿ ಬಿಟ್ಟರೆ ಮತ್ತೆ ತಲೆ ಬಿಸಿ ಇಲ್ಲ. ಮದುವೆ ಕಲ್ಯಾಣ ಮಂಟಪದಲ್ಲಿ ನಡೆಯುವ ಏರ್ಪಾಟು. ಊರ ಮಂದಿಯಲ್ಲಿ ಆಪ್ತರನ್ನಷ್ಟೇ ಆಹ್ವಾನಿಸಿದ್ದಳು ನಾಗಮ್ಮ. ಆಹ್ವಾನಿಸಿದ್ದೆಂದರೆ ಖುದ್ದು ಹೋಗಿ ಕರೆದದ್ದಲ್ಲ. ವಯಸ್ಸಿನಲ್ಲಿ ಸಣ್ಣವನಾದರೂ ಪದ್ಮನಾಭನ ಹೆಗಲ ಮೇಲೆ ಅಕ್ಕನ ಮದುವೆಯ ಓಡಾಟದ ಜವಾಬ್ದಾರಿ ಬಿದ್ದಿದೆ. ಹುಡುಗ ಅವನ್ನೆಲ್ಲಾ ಉತ್ಸಾಹದಿಂದ ನಿರ್ವಹಿಸುತ್ತಿದ್ದಾನೆ. ಅಪ್ಪನನ್ನು ಬರಲು ಒಪ್ಪಿಸಿದ ಮೊದಲ ಕಾರ್ಯದಲ್ಲೇ ಯಶಸ್ಸು ಸಿಕ್ಕಿದ್ದು ಅವನಿಗೆ ಕೋಡು ಬಂದಂತಾಗಿದೆ. ಅಲ್ಲದೆ ಕೈಲಿ ದುಡ್ಡೊಂದಿದ್ದರೆ ಈಗಿನ ದಿನಮಾನಗಳಲ್ಲಿ ಯಾವ ಕೆಲಸ ಕಷ್ಟ? ಅಡಿಗೆ ಭಟ್ಟರು ಪಟಾಲಂ ಜೊತೆಗೆ ಹಾಜರಿ ಹಾಕಿ ಬೇಕಾದ್ದನ್ನು ಮಾಡಿ ಬಡಿಸಿ ಹೋಗುತ್ತಾರೆ ಅಂದರೆ ಮುಕ್ಕಾಲುವಾಸಿ ತಲೆಬಿಸಿ ಕಡಿಮೆ ಆದ ಲೆಕ್ಕ. ಯಾವುದೇ ಸಮಾರಂಭದ ಹೆಗ್ಗಳಿಕೆ ಉಳಿದುಕೊಳ್ಳುವುದೇ ಅಲ್ಲಿ ತಿಂದ ತಿಂಡಿ, ಉಂಡ ಊಟಗಳ ರುಚಿಕಟ್ಟಾದ ವೈವಿಧ್ಯತೆಗಳ ಅಳತೆಗೋಲಿನ ಮೇಲೆ. ಮನುಷ್ಯರನ್ನು ತೃಪ್ತಿಪಡಿಸಲು ಸಾಧ್ಯವಾಗುವುದು ಹೊಟ್ಟೆಯ ಮೂಲಕ ಮಾತ್ರ ಎನ್ನುವ ಹೇಳಿಕೆ ಮಾತೇ ಉಂಟಲ್ಲ? ನಾಲಿಗೆಯ ಮೂಲಕ ಅಂತಲೂ ಹೇಳಬಹುದು.

ಸದ್ಯದಲ್ಲೇ ಮದುಮಗಳಾಗುವ ಪೂರ್ಣಿಮಾ ತನ್ನದೇ ಲೋಕದಲ್ಲಿ ಕಳೆದು ಹೋಗಿದ್ದಳು. ನಿಶ್ಚಿತಾರ್ಥದ ಸೀರೆಯ ಖರೀದಿಗೆ ನಾಲ್ಕು ದಿನ ಪೇಟೆಯ ಬಸ್ಸು ಹತ್ತಿದ ಮಗಳ ಅತಿರೇಕದ ಬಗ್ಗೆ ನಾಗಮ್ಮನಿಗೆ ಕಿರಿಕಿರಿಯಾಗಿತ್ತು.

'ದುಬಾರಿ ಮದುವೆ ಸೀರೆ ಅಂತಾದರೆ ಒಂದು ಲೆಕ್ಕ. ನಿಶ್ಚಿತಾರ್ಥಕ್ಕೆ ಅಷ್ಟೆಲ್ಲಾ ಕುಣಿಯೋಕೇನಿದೆ? ಅಬ್ಬಬ್ಬಾ ಅಂದರೆ ಐವತ್ತರವತ್ತು ಜನ ಬರ್ತಾರಪ್ಪಾ..' ತನ್ನ ಅಸಹನೆಯನ್ನು ಪರೋಕ್ಷವಾಗಿ ಸೂಚಿಸಿದ್ದಳು ನಾಗಮ್ಮ.

'ಸಾವಿರಗಟ್ಲೆ ದುಡ್ಡು ಸುರಿಯೋದಿಲ್ಲನೇ? ಪುಗಸಟ್ಟೆ ಕೊಡ್ತಾರಾ? ನಮಗೆ ಖುಷಿಯಾಗೋದನ್ನ ಆರಿಸ್ಬೇಕಪ್ಪಾ. ಎಂತದೋ ಒಂದು ಅನ್ನೋಕೆ ಇದೇನು ನಿಮ್ಮ ಕಾಲ ಅಂದ್ಕಂಡಿದೀಯಾ?'

ತನ್ನ ಕಾಲ ಬೇರೆಯದು ಅನ್ನುವುದನ್ನು ಮಾತು ಮಾತಿಗೆ

## ಶ್ರೇಷ್ಠ

ಕಡಲ ಮುತ್ತಿಗಿಂತಲೂ
ಶ್ರೇಷ್ಠ ನೀನು....
ಅದಕ್ಕೆ
ಬೆಲೆ ಕಟ್ಟಬಹುದು
ನಿನಗೆ
ಬೆಲೆ ಕಟ್ಟಲಾಗದು!

★ ಕೆ ಬಿ.ರಂಗಸ್ವಾಮಿ

